OS No.185/2021 PW-1

**<u>ದಿನಾಂಕ 04.11.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ ಃ</u>**

ನಾನು ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿದ ವಿಚಾರಗಳೆಲ್ಲವೂ ಸತ್ಯವಾಗಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ.

ನಾನು ನನ್ನ ಪರ ಸಾಕ್ಷಿಯಾಗಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ದಿಃ02.12.2020 ರ ನೊಂದಾಯಿತ ಶುದ್ಧ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಸದರಿ ದಾಖಲೆಗೆ ನಾನು ಎಲ್ಲಾ ಪುಟಗಳಲ್ಲಿಯೂ ಸಹಿಗಳನ್ನು ಹಾಕಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು, ಸದರಿ ದಾಖಲೆಗೆ ಪ್ರತಿವಾದಿಯವರು ಸಹಿಗಳನ್ನು ಹಾಕಿರುತ್ತಾರೆ ಸಾಕ್ಷಿಯು ಪ್ರತಿವಾದಿಯ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಅವುಗಳನ್ನು ಒಟ್ಟಾರೆಯಾಗಿ ನಿಪಿ-1(ಬಿ) ಎಂದು, ಸದರಿ ದಾಖಲೆಗೆ ಸಾಕ್ಷಿದಾರರಾದ ಸೋಮಶೇಖರ್ ಎಂ ಎನ್ ಮತ್ತು ನಂದೀಶ್ ಸಿ ಎನ್ ರವರು ಸಹಿಗಳನ್ನು ಹಾಕಿರುತ್ತಾರೆ. ಸದರಿ ದಾಖಲೆಯನ್ನು ಎಂ ಆರ್ ರವಿಶಂಕರ್ ರವರು ತಯಾರಿಸಿರುತ್ತಾರೆ ಅವರು ಬಿಕ್ಲಂ ಆಗಿ ಸಹಿಯನ್ನು ಹಾಕಿರುತ್ತಾರೆ. ಸದರಿ ಅವರ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1(ಸಿ) ಯಿಂದ ನಿಪಿ-1(ಇ) ಎಂದು ಗುರುತಿಸಲಾಯಿತು. ನಮೂನೆ 15 ಹಾಜರುಪಡಿಸಿದ್ದು ಅದನ್ನು ಅನ್ನು ನಿಪಿ-2 ಎಂದು, ಸರ್ವೆ ನಂಬರ್ 108 ರ 2 ಪಹಣಿಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಮತ್ತು ನಿಪಿ-4 ಎಂದು, ಎಂ ಆರ್ ಸಂಖ್ಯೆ 3/2008-09 ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು, ದಿಃ01.01.2020 ರಿಂದ 16.11.2021 ರ ಇಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು, ದಿಃ28.10.2021 ರ ಲೀಗಲ್ ನೋಟೀಸ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7

ಎಂದು, 3 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅದನ್ನು ಒಟ್ಟಾರೆಯಾಗಿ ನಿಪಿ-8 ಎಂದು, unclaimed ಎಂದು ಹಿಂದಿರುಗಿರುವ 3 ಅಂಚೆ ಲಕೋಟೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಸದರಿ 3 ಅಂಚೆ ಲಕೋಟೆಗಳನ್ನು ನಿಪಿ-9 ರಿಂದ ನಿಪಿ-11 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ :**

ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.